# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1336 |
| ಸದಸ್ಯರ ಹೆಸರು | ಶ್ರೀ ಪಿ.ಎಚ್. ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಈ ವರ್ಷ ಉತ್ತಮ ಮಳೆಯಾಗಿದ್ದು ಸಕಾಲದಲ್ಲಿ ಬಿತ್ತನೆ ಬೀಜ, ಯೂರಿಯಾ ಗೊಬ್ಬರ ಸಮರ್ಪಕವಾಗಿ ದೊರೆಯದ ಕಾರಣಕ್ಕಾಗಿ ರೈತರು ಪರದಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲಿಯವರೆಗೆ, ರೈತರಿಗೆ ವಿತರಣೆ ಮಾಡಲಾದ ಯೂರಿಯಾ ಗೊಬ್ಬರ ಎಷ್ಟು; ಯೂರಿಯಾ ಗೊಬ್ಬರದ ಸಂಗ್ರಹವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | <u>ಬಿತ್ತನೆ ಬೀಜ:</u><br>2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜದ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗಿರುವುದಿಲ್ಲ.<br>ರಾಜ್ಯ ಸರ್ಕಾರ ಬೀಜಗಳ ಪೂರೈಕೆ ಯೋಜನೆಯಡಿ 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 82.50 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆ ಕೈಗೊಳ್ಳುವ ಗುರಿ ಇದ್ದು 4.63ಲಕ್ಷ ಕ್ವಿಂ. ಬಿತ್ತನೆ ಬೀಜಗಳ ಬೇಡಿಕೆಗೆ, 6.67 ಲಕ್ಷ ಕ್ವಿಂ. ಬಿತ್ತನೆ ಬೀಜಗಳು ಲಭ್ಯವಿದ್ದು, ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ವಿವಿಧ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗಿರುತ್ತದೆ.<br>ಬಿತ್ತನೆ ಬೀಜ ವಿತರಣೆ ಕಾರ್ಯ ಪ್ರಗತಿಯಲ್ಲಿದ್ದು, ದಿನಾಂಕ: 13.08.2025 ರವರೆಗೆ ರೈತ ಸಂಪರ್ಕ ಕೇಂದ್ರಗಳಲ್ಲಿ 3,19,517 ಕ್ವಿಂಟಾಲ್ ಗಳಷ್ಟು ಬಿತ್ತನೆ ಬೀಜಗಳನ್ನು 7.33 ಲಕ್ಷ ರೈತರಿಗೆ ವಿತರಣೆ ಮಾಡಲಾಗಿದ್ದು, 48,011 ಕ್ವಿಂಟಾಲ್ ಗಳಷ್ಟು ದಾಸ್ತಾನು ರೈತ ಸಂಪರ್ಕ ಕೇಂದ್ರಗಳಲ್ಲಿ ಇರುತ್ತದೆ. ಉಳಿದ ಪ್ರಮಾಣ ಸಂಬಂಧಿಸಿದ ಸಂಸ್ಥೆಗಳಲ್ಲಿ ಲಭ್ಯವಿರುತ್ತದೆ.<br><u>ರಸಗೊಬ್ಬರ:</u><br>ರಾಜ್ಯದಲ್ಲಿ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರವು ಕೇಂದ್ರ ಸರ್ಕಾರದಿಂದ ಸರಬರಾಜಾಗದ ಕಾರಣ ಕೆಲವು ಜಿಲ್ಲೆಗಳಲ್ಲಿ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>• 2025ನೇ ಸಾಲಿನ ಮುಂಗಾರು ಹಂಗಾಮಿನ ಪ್ರಾರಂಭದಲ್ಲಿ 3.46 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಆರಂಭಿಕ ಶಿಲ್ಕು ಇದ್ದು, ದಿನಾಂಕ: 16.08.2025ರಂತೆ, 6.49 ಲಕ್ಷ ಮೆ.ಟನ್ ಸರಬರಾಜಾಗಿರುತ್ತದೆ. |

| | | |
|---|---|---|
| | | • ಮುಂಗಾರು ಹಂಗಾಮಿನಲ್ಲಿ ಇಲ್ಲಿಯವರೆಗೆ (01.04.2025ರಿಂದ 16.08.2025ರವರೆಗೆ) ಒಟ್ಟು 8.97 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರವನ್ನು ವಿತರಣೆ ಮಾಡಲಾಗಿದ್ದು, ಪ್ರಸ್ತುತ ರಾಜ್ಯದಲ್ಲಿ 0.98 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ದಾಸ್ತಾನಿರುತ್ತದೆ.<br><br>ಇಲ್ಲಿಯವರೆಗೆ ರೈತರಿಗೆ ವಿತರಣೆ ಮಾಡಲಾದ ಮತ್ತು ದಾಸ್ತಾನಿರುವ ಯೂರಿಯಾ ರಸಗೊಬ್ಬರದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಇನ್ನೂ ಬೇಕಾಗಬಹುದಾದ ಯೂರಿಯಾ ಗೊಬ್ಬರ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿಗೆ (ಸೆಪ್ಟೆಂಬರ್-2025ರ ಅಂತ್ಯದವರೆಗೆ) 4.67 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರ ಸರಬರಾಜಿಗೆ ಬಾಕಿ ಇದ್ದು ವಿವರವನ್ನು ಅನುಬಂಧಲ್ಲಿ ನೀಡಲಾಗಿದೆ. |
| ಇ) | ಈ ಬೇಡಿಕೆಯನ್ನು ಎಷ್ಟು ದಿನದಲ್ಲಿ ಪೂರೈಸಲಾಗುವುದು? (ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದಿಂದ ಮಾಹೆವಾರು ರಸಗೊಬ್ಬರ ಹಂಚಿಕೆಯಾಗುವುದರಿಂದ, ಅದರ ಆಧಾರದ ಮೇಲೆ ಹಂಗಾಮಿನ (ಸೆಪ್ಟೆಂಬರ್) ಅಂತ್ಯದೊಳಗೆ ಯೂರಿಯಾ ರಸಗೊಬ್ಬರದ ಪೂರೈಕೆಗೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: AGRI/272/ACT/2025

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು

ಅನುಬಂಧ-1(ಎಲ್.ಸಿ.ಕ್ಯೂ-1336)

2025 ನೇ ಸಾಲಿನ ಮುಂಗಾರು ಹಂಗಾಮಿನ ಯೂರಿಯಾ ರಸಗೊಬ್ಬರ ಸರಬರಾಜು ವಿವರ(ದಿನಾಂಕ 16.08.2025 ರವರೆಗೆ) ಮೆ. ಟನ್ ಗಳಲ್ಲಿ

| ಕ್ರ. ಸಂ | ಜಿಲ್ಲೆ | ಏಪ್ರಿಲ್ ರಿಂದ ಸೆಪ್ಟೆಂಬರ್-2025 ರ ಬೇಡಿಕೆ | ಏಪ್ರಿಲ್ ರಿಂದ ಆಗಸ್ಟ್- 2025 ರ ಬೇಡಿಕೆ | ಆರಂಭಿಕ ಶಿಲ್ಕು | ಸರಬರಾಜು | ಒಟ್ಟು ದಾಸ್ತಾನು 16.08.2025 (ಆರಂಭಿಕ ಶಿಲ್ಕು ಸೇರಿದಂತೆ) | ಮಾರಾಟ | ಸೆಪ್ಟೆಂಬರ್ ಅಂತ್ಯಕ್ಕೆ ಮಾಡಬೇಕಾದ ಬಾಕಿ ಸರಬರಾಜು | ಉಳಿಕೆ ದಾಸ್ತಾನು ಪ್ರಮಾಣ 16.08.2025 ರಂತೆ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7(5+6) | 8(7-10) | 9(3-6) | 10 |
| 1 | ಬಾಗಲಕೋಟೆ | 50023 | 40489 | 22807 | 30891 | 53698 | 50080 | 19132 | 3618 |
| 2 | ಬೆಂಗಳೂರು | 11420 | 9243 | 2875 | 5069 | 7944 | 6804 | 6351 | 1140 |
| 3 | ಬೆಳಗಾಂ | 133975 | 108440 | 41897 | 68079 | 109976 | 103867 | 65896 | 6109 |
| 4 | ಬಳ್ಳಾರಿ | 44350 | 35897 | 14501 | 28632 | 43133 | 37648 | 15718 | 5485 |
| 5 | ಬೆಂಗಳೂರು ನಗರ | 4568 | 3697 | 2955 | 9243 | 12197 | 9797 | -4675 | 2400 |
| 6 | ಬೀದರ್ | 13727 | 11111 | 5034 | 7646 | 12680 | 10963 | 6081 | 1717 |
| 7 | ಬಿಜಾಪುರ | 48175 | 38993 | 21491 | 29805 | 51296 | 47725 | 18370 | 3571 |
| 8 | ಚಾಮರಾಜನಗರ | 17824 | 14427 | 4673 | 9200 | 13873 | 12213 | 8624 | 1660 |
| 9 | ಚಿಕ್ಕಬಳ್ಳಾಪುರ | 16602 | 13438 | 3697 | 9462 | 13159 | 11857 | 7140 | 1302 |
| 10 | ಚಿಕ್ಕಮಗಳೂರು | 34164 | 27653 | 8150 | 21880 | 30031 | 26561 | 12284 | 3470 |
| 11 | ಚಿತ್ರದುರ್ಗ | 26643 | 21565 | 8339 | 18808 | 27147 | 25108 | 7835 | 2039 |
| 12 | ದಕ್ಷಿಣ ಕನ್ನಡ | 3889 | 3148 | 2432 | 1544 | 3976 | 2060 | 2345 | 1916 |
| 13 | ದಾವಣಗೆರೆ | 54162 | 43839 | 13206 | 34565 | 47771 | 42978 | 19597 | 4793 |
| 14 | ಧಾರವಾಡ | 28266 | 22879 | 7212 | 20204 | 27415 | 24560 | 8062 | 2855 |
| 15 | ಗದಗ | 29174 | 23614 | 6857 | 18444 | 25301 | 23615 | 10730 | 1686 |
| 16 | ಕಲ್ಬುರ್ಗಿ | 34027 | 27542 | 10122 | 14893 | 25015 | 21222 | 19134 | 3793 |
| 17 | ಹಾಸನ | 51313 | 41533 | 16214 | 34065 | 50279 | 47237 | 17248 | 3042 |
| 18 | ಹಾವೇರಿ | 66629 | 53930 | 19262 | 43333 | 62594 | 59701 | 23296 | 2893 |
| 19 | ಕೊಡಗು | 19803 | 16029 | 8654 | 7879 | 16533 | 13317 | 11924 | 3216 |
| 20 | ಕೋಲಾರ | 13718 | 11103 | 2924 | 8213 | 11137 | 9490 | 5505 | 1647 |
| 21 | ಕೊಪ್ಪಳ | 51286 | 41511 | 12328 | 29626 | 41954 | 39527 | 21660 | 2427 |
| 22 | ಮಂಡ್ಯ | 41194 | 33343 | 10443 | 22298 | 32741 | 28774 | 18896 | 3967 |
| 23 | ಮೈಸೂರು | 36993 | 29942 | 18483 | 22215 | 40698 | 33563 | 14778 | 7135 |
| 24 | ರಾಯಚೂರು | 82959 | 67148 | 23834 | 39858 | 63692 | 56592 | 43101 | 7100 |
| 25 | ರಾಮನಗರ | 17637 | 14275 | 4754 | 8492 | 13246 | 11902 | 9145 | 1344 |
| 26 | ಶಿವಮೊಗ್ಗ | 31537 | 25526 | 9783 | 19712 | 29495 | 24952 | 11825 | 4543 |
| 27 | ತುಮಕೂರು | 30499 | 24686 | 12266 | 19542 | 31807 | 27709 | 10957 | 4098 |
| 28 | ಉಡುಪಿ | 2478 | 2006 | 801 | 1738 | 2539 | 1757 | 740 | 782 |
| 29 | ಉತ್ತರ ಕನ್ನಡ | 16969 | 13735 | 3037 | 11229 | 14266 | 13104 | 5740 | 1162 |
| 30 | ವಿಜಯನಗರ | 43149 | 34925 | 10845 | 27593 | 38438 | 35540 | 15556 | 2898 |
| 31 | ಯಾದಗಿರಿ | 59847 | 48441 | 16625 | 25666 | 42291 | 37770 | 34181 | 4521 |
| | ಒಟ್ಟು | **1117000** | **904108** | **346499** | **649822** | **996321** | **897992** | **467178** | **98329** |